ಸ್ವಚ್ಛ ಗ್ರಾಮ ಯೋಜನೆಯಡಿ ಪ್ರಾರಂಭಿಸಲಾಗಿರುವ ಕಾಮಗಾರಿಗಳು

4032 (4556) : ಶ್ರೀ ಅಂಗಾರ ಎಸ್ (ಸುಳ್ಯ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸ್ವಚ್ಛ ಗ್ರಾಮ ಯೋಜನೆಯಡಿಯಲ್ಲಿ ಈವರೆಗೆ ಎಷ್ಟು ಜಿಲ್ಲೆಗಳಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ.

ಆ) ಸ್ವಚ್ಛ ಗ್ರಾಮ ಯೋಜನೆಗೆ ಕೇಂದ್ರ ಸರ್ಕಾರ ಒದಗಿಸುವ ಹಣ ಎಷ್ಟು; ಇದರಲ್ಲಿ ರಾಜ್ಯ ಸರ್ಕಾರದ ಪಾಲು ಎಷ್ಟು; ವಿವರ ಒದಗಿಸುವುದು;

ಇ) ಈ ಕಾಮಗಾರಿಗಳಿಗೆ ಸಾರ್ವಜನಿಕ ಮೂಲಕ ಸಂಗ್ರಹಿಸಲಾದ ಹಣ ಎಷ್ಟು;

ಈ) ಯೋಜನೆಯಡಿ ಅವ್ಯವಹಾರಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಬಂದಿದ್ದಲ್ಲಿ ಸಂಪೂರ್ಣ ವಿವರ ನೀಡುವುದು)?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

ಅ) ರಾಜ್ಯದ ಎಲ್ಲ 27 ಜಿಲ್ಲೆಗಳಲ್ಲಿ ಸ್ವಚ್ಛ ಗ್ರಾಮ ಯೋಜನೆಯ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ.

ಆ) ರೂ. 260.00 ಕೋಟಿ ಅಂದಾಜಿನ ಸ್ವಚ್ಛ ಗ್ರಾಮ ಯೋಜನೆ ಸಂಪೂರ್ಣವಾಗಿ ರಾಜ್ಯ ಸರ್ಕರದ ಯೋಜನೆಯಾಗಿದೆ. ಈ ಯೋಜನೆಯ ಬಂಡವಾಳ ವೆಚ್ಚದ ಪಾಲುಗಳ ವಿವರಗಳು ಕೆಳಕಂಡಂತಿವೆ:

1.	ಹುಡ್ಕೋ ಸಂಸ್ಥೆಯಿಂದ ಸಾಲ	–	ರೂ. 208.00 ಕೋಟಿ
2.	ರಾಜ್ಯ ಸರ್ಕಾರದ ಪಾಲು	–	ರೂ. 26.00 ಕೋಟಿ
3.	ಸಮುದಾಯ ವಂತಿಗೆ	–	ರೂ. 26.00 ಕೋಟಿ

ಇ) ಈವರೆವಿಗೆ ಒಟ್ಟು ರೂ. 16.28 ಕೋಟಿ ಸಾರ್ವಜನಿಕ ವಂತಿಗೆಯನ್ನು ಈ ಯೋಜನೆಯಡಿ ಸಂಗ್ರಹಿಸಲಾಗಿದೆ.

ಈ) ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಗಣೇಕಲ್ಲು ಗ್ರಾಮದಲ್ಲಿ ಸ್ವಚ್ಛ ಗ್ರಾಮ ಯೋಜನೆಯಡಿ ಕೈಗೊಂಡ ಕಾಮಗಾರಿಯಲ್ಲಿ ರೂ. 2.00 ಲಕ್ಷದ ಅವ್ಯವಹಾರ ಆಗಿದ್ದು ಸಂಬಂಧಪಟ್ಟ ಇಂಜಿನಿಯರ್ ರವರಾದ ಶ್ರೀ ಪಿ.ಎಸ್. ಬೆನಕಟ್ಟಿ ರವರ ವಿರುದ್ಧ ಶಿಸ್ತು ಕ್ರಮ ಕೈಗೊಂಡು ನಷ್ಟ ವಸೂಲು ಮಾಡುವುದರ ಜೊತೆಗೆ ಕಠಿಣ ದಂಡನೆಯನ್ನು ವಿದಿಸಿ, ದಿ: 17.3.03 ರಂದು ಸೇವೆಯಿಂದ ವಜಾ ಮಾಡಲಾಗಿದೆ.

ಸ್ವಚ್ಛ ಗ್ರಾಮ ಯೋಜನೆಯಡಿ ಕಲ್ಮಡಕ ಮತ್ತು ಬೆಳ್ಳಾರೆ ಗ್ರಾಮಗಳಲ್ಲಿ ಗುರುತಿಸಲಾದ ಕಾಮಗಾರಿಗಳು

4033 (4557) : ಶ್ರೀ ಅಂಗಾರ ಎಸ್. (ಸೂಳ್ಯ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸ್ವಚ್ಛ ಗ್ರಾಮ ಯೋಜನೆಯಡಿ ಕಲ್ಮಡಕ ಮತ್ತು ಬೆಳ್ಳಾರೆ ಗ್ರಾಮ ಪಂಚಾಯಿತಿ ವ್ಯಪ್ತಿಯಲ್ಲಿ ಎಷ್ಟು ಕಾಮಗಾರಿಗಳನ್ನು ಗುರುತಿಸಲಾಗಿದೆ;

ಆ) ಈ ಕಾಮಗಾರಿಗಳಿಗೆ ಸಾರ್ವಜನಿಕರಿಂದ ಸಂಗ್ರಹಿಸಲಾದ ಹಣ ಎಷ್ಟು; (ಸಂಗ್ರಹ ಮಾಡಿದ ಹಣದ ವಿವರಗಳನ್ನು ಕಾಮಗಾರಿವಾರು ನೀಡುವುದು);